ಓ. ಎಸ್. ನಂಃ 102/2007

ಪಿ . ಡಬ್ಲ್ಯೂ 2

ದಿಃ 24-08- 2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಜಿ ಕೆ ಜಿ ಪ್ರತಿವಾದಿ ಪರ ವಕೀಲರಿಂದ ಃ

ನನ್ನ ಅತ್ತೆ ಮತ್ತು ನನ್ನ ಹೆಂಡತಿ ಅವರ ಪರವಾಗಿ ನಾನು ಸಾಕ್ಷಿ ಹೇಳಲು ಇವತ್ತು ನ್ಯಾಯಾಲಯಕ್ಕೆ ಬಂದಿರುತ್ತೇನೆ . ಬೋಪಾಲಪ್ಪ ಅವರ ಊರು ಯತ್ತಿನಹಳ್ಳಿ ಇರುತ್ತದೆ. ಬೋಪಾಲಪ್ಪ ಅವರ ತಂದೆಯ ಹೆಸರು ಬಸವಂತಪ್ಪ ಇರುತ್ತದೆ . ನನ್ನ ಮಾಹಿತಿ ಪ್ರಕಾರ ಬೋಪಾಲಪ್ಪ ಅವರಿಗೆ 4 ಜನ ಅಣ್ಣ ತಮ್ಮಂದಿರು 2 ಜನ ಅಕ್ಕ ತಂಗಿಯರು ಇರುತ್ತಾರೆ . ಅವರ ಹೆಸರು ರವಿ ಬಸವಂತಪ್ಪ ನೇಮಣ್ಣವರ , ವರ್ದಮಾನ ಬಸವಂತಪ್ಪ ನೇಮಣ್ಣವರ , ಪದ್ಮರಾಜ ಬಸವಂತಪ್ಪ ನೇಮಣ್ಣವರ , ಪ್ರೋತಿ ಅಶೋಕ ಬಸವಂತಪ್ಪ ನೇಮಣ್ಣವರ ಇರುತ್ತದೆ ಅವರ ಅಕ್ಕ ತಂಗಿಯವರ ಹೆಸರು ನನಗೆ ನೆನಪಿಲ್ಲ . ಅವರ ಅಕ್ಕತಂಗಿಯರ ಮದುವೆ ಆಗಿರುತ್ತದೆ ಎಂದರೆ ಸರಿ. ಅವರಿಗೆ ಯಾವ ಊರಿಗೆ ಮದುವೆ ಮಾಡಿ ಕೊಟ್ಟಿರುತ್ತಾರೆ ಎಂದು ನನಗೆ ವಯಕ್ತಿಕವಾಗಿ ಮಾಹಿತಿ ಇರುವುದಿಲ್ಲ . ಬೋಪಾಲಪ್ಪ ಅವರ ತಂದೆಯ ಅಕ್ಕ ತಂಗಿಯರು ಇಬ್ಬರು ಇರುತ್ತಾರೆ ನನಗೆ ಅಷ್ಟು ಮಾಹಿತಿ ಇರುವುದಿಲ್ಲ. ಬಸವಂತಪ್ಪ ಅವರ ಘರಾಣೆಯ ಬಗ್ಗೆ ನಿಮಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಅಷ್ಟೊಂದು ವಯಕ್ತಿಕ ಮಾಹಿತಿ ಇರುವುದಿಲ್ಲ ತಿಳಿದುಕೊಂಡು ಹೇಳುತ್ತೇನೆ ಎಂದು ನುಡಿಯುತ್ತಾರೆ. ಬೋಪಾಲಪ್ಪ ಅವರ ಅಣ್ಣ ತಮ್ಮಂದಿರು ಈಗ ಸಧ್ಯಕ್ಕೆ ಬೇರೆ ಬೇರೆ ಆಗಿರುತ್ತಾರೆ.

2. ಬೋಪಾಲಪ್ಪ ಅವರು ಮುಖ್ಯ ಶಿಕ್ಷಕರಾಗಿ ಮುಗಳಿಕಟ್ಟಿಯಲ್ಲಿ ನೌಕರಿ ಮಾಡಿದರು. ಎಷ್ಟನೇ ಈಸವಿಯಲ್ಲಿ ಅವರು ಮುಗಳಿಕಟ್ಟಿ ಯಲ್ಲಿ ನೌಕರಿ ಮಾಡಿದರು ಎಂದು ನನಗೆ ಗೊತ್ತಿಲ್ಲ . ಬೋಪಾಲಪ್ಪ ಅವರು ಶಿಕ್ಷಕರಾಗಿ ಎಷ್ಟನೇ ಈಸವಿಯಲ್ಲಿ ನೇಮಕಗೊಂಡಿದ್ದರು ಎಂದು ನನಗೆ ನೆನಪಿಲ್ಲ . ಬೋಪಾಲಪ್ಪ ಅವರು ಶಿಕ್ಷಕರಾಗಿ ಯಾವ ಯಾವ ಹಳ್ಳಿಗಳಲ್ಲಿ ನೌಕರಿ ಮಾಡಿದರು ಎಂದರೆ ಸಾಕ್ಷಿಯು ಹೊಸುರು ,ಯತ್ನಳ್ಳಿ , ಮುಗಳಿಕಟ್ಟಿಯಲ್ಲಿ ನೌಕರಿ ಮಾಡಿದರು ಎಂದು ನುಡಿಯುತ್ತಾರೆ . ಸಾಕ್ಷಿಯು

ಮುಂದುವರೆದು ಮುಗಳಿಕಟ್ಟಿಯಲ್ಲಿ ಜಾಸ್ತಿ ವರ್ಷ ಕೆಲಸ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

3. ಬೋಪಾಲಪ್ಪ ಅವರ ಘರಾಣೆಗೆ ಎಷ್ಟು ಆಸ್ತಿಗಳಿವೆ ಎಂದರೆ ಸಾಕ್ಷಿಯು ನನ್ನ ಮಾಹಿತಿ ಪ್ರಕಾರ 4 ಎಕರೆ ಚಿಲ್ಲರೆ ಜಮೀನು ಇದೆ ಅದರಲ್ಲಿ ಬೋಪಾಲಪ್ಪ ಅವರಿಗೆ 1 ಎಕರೆ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. 1 ಎಕರೆ ಜಮೀನು ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಡಿಕ್ರಿ ಆದ ನಂತರ ನಮಗೆ ಗೊತ್ತಿಲ್ಲದ ರೀತಿಯಲ್ಲಿ ಅವರು ಸುದಾ ಅವರಿಗೆ ಪರಬಾರೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ . ಮನೆಯ ಆಸ್ತಿ ಯತನಳ್ಳಿ ಯಲ್ಲಿ ಇರುತ್ತದೆ ಅದರ ಆಸ್ತಿ ನಂಬರ ನನಗೆ ನೆನಪಿಲ್ಲ .

4. ಬೋಪಾಲಪ್ಪ ಅವರ ಮದುವೆ ಸುದಾ ನೇಮಣ್ಣವರ ಅವರೊಂದಿಗೆ ದಿ 15-06-1997 ರಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ . ಸುದಾ ನೇಮಣ್ಣವರ ಮತ್ತು ಬೋಪಾಲಪ್ಪ ಅವರು ಜೈನ ಪದ್ಧತಿ ಪ್ರಕಾರ ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಕಾಯ್ದೆಸೀರ ಬಾವಚಿತ್ರ ಮದುವೆ ಬಗ್ಗೆ ಇರುತ್ತದೆ ಎಂದರೆ ಸರಿಯಲ್ಲ . ಸುದಾ ನೇಮಣ್ಣವರ ಅವರು ಬೋಪಾಲಪ್ಪ ಅವರ ಹೆಂಡತಿ ಎಂದು ತೋರಿಸಲು ರೇಶನ ಕಾರ್ಡ, ವೋಟರ ಐಡಿ ಕಾರ್ಡ ಮತ್ತು ಆದಾರ ಕಾರ್ಡ ಅದರ ಬಗ್ಗೆ ಇರುತ್ತದೆ ಎಂದರೆ ಸಾಕ್ಷಿಯು ಕೊಟ್ಟಿಯಾಗಿ ಮಾಡಿಸಿರಬಹುದು ಎಂದು ನುಡಿಯುತ್ತಾರೆ. ನಿಮ್ಮ ಅತ್ತೆಯವರು ಯಾವ ಕಾರಣಕ್ಕೆ ಈ ದಾವೆಯನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿಯು 2005 ನೇ ಈಸವಿಯಲ್ಲಿ ಬೋಪಾಲ ನೇಮಣವರ ನನ್ನ ಮಾವ ತೀರಿಕೊಂಡ ನಂತರ ನಮಗೆ ಗೊತ್ತಿಲ್ಲದೇ ನಮಗೆ ಪಾರ್ಟಿ ಮಾಡದೇ ಪದ್ಮರಾಜ ನೇಮಣ್ಣವರ ಅವರನ್ನು ಪಾರ್ಟಿ ಮಾಡಿ ಕೇಸನ್ನು ದಾಖಲಿಸಿರುತ್ತಾರೆ ನಂತರ ಡಿಕ್ರಿ ಮಾಡಿದ ನಂತರ ನಮಗೆ ಮಾಹಿತಿ ಸಿಕ್ಕಿತು ತಕ್ಷಣವೇ ನಾವು ಅವರು ವಾರಸುದಾರರು ಅಲ್ಲ ಎಂದು ಒಂದು ದಾವೆಯನ್ನು ಹಾಕಿರುತ್ತೇವೆ ಎಂದು ನುಡಿಯುತ್ತಾರೆ . ನಿಮ್ಮ ಅತ್ತೆಯವರು ಬೋಪಾಲಪ್ಪ ಅವರ ಹೆಂಡತಿ ಎಂದು ತೋರಿಸಲು ನೀವು ರೇಶನ ಕಾರ್ಡ, ವೋಟರ ಐಡಿ ಕಾರ್ಡ , ಆದಾರ ಕಾರ್ಡ ಮತ್ತು ಸರಕಾರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವಿರಾ ಎಂದರೆ ಸಾಕ್ಷಿಯು ಹೌದು ನಾನು ಅವರ ರೇಶನ ಕಾರ್ಡ , ವೋಟರ ಐಡಿ ಕಾರ್ಡ , ಆದಾರ ಕಾರ್ಡ ಮತ್ತು ಒ ಎಸ್ ನಂಬರ 36/1987 ಇದರ ರಾಜಿ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಬೋಪಾಲಪ್ಪ

ಅವರ ಸರಕಾರಿ ನೌಕರಿ ಸೇವಾ ರೆಜಿಸ್ಟರನಲ್ಲಿ ಹೆಂಡತಿ ಎಂದು ಯಾರ ಹೆಸರು ದಾಖಲು ಇರುತ್ತದೆ ಎಂದರೆ ಸಾಕ್ಷಿಯು ನಾನು ನೋಡಿಲ್ಲ ಅಲ್ಲಿ ಕೊಟ್ಟ ದಾಖಲೆಗಳನ್ನು ಹಾಜರುಪಡಿಸಿ ಮಾಡಿಕೊಂಡಿರುತ್ತಾರೆ ಎಂದು ನನಗೆ ಮಾಹಿತಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಅತ್ತೆ ಅವರ ರೇಶನ ಕಾರ್ಡ ಮತ್ತು ವೋಟರ ಐಡಿ ಕಾರ್ಡ ನಾವು ಕೊಟ್ಟಿಯಾಗಿ ಹುಟ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ .

5. ಗ್ರಾಮ ಪಂಚಾಯಿತಿ ಜಮೀನಿನಲ್ಲಿ ಅದು ಮೊದಲು ಖುಲ್ಲಾ ಜಾಗ ಇದ್ದು ಇವಾಗ ಮನೆಯನ್ನು ಕಟ್ಟಿರುತ್ತಾರೆ. ಆ ಮನೆಯಲ್ಲಿ ಯಾರು ಇದಾರೆ ಎಂದರೆ ಸಾಕ್ಷಿಯು ಕೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಡಿಕ್ರಿ ಪಡೆದುಕೊಂಡು ನಂತರ ಗ್ರಾಮ ಪಂಚಾಯಿತಿಯಲ್ಲಿ ತಮ್ಮ ಹೆಸರಿನಲ್ಲಿ ನೊಂದಣಿ ಮಾಡಿ ಅಲ್ಲಿ ಮನೆಯನ್ನು ಕಟ್ಟಿರುತ್ತಾರೆ ಅಲ್ಲಿ ಸುದಾ ಅವರು ವಾಸವಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಅತ್ತೆ ಈಗ ಹುನಗುಂದನಲ್ಲಿ ಇರುತ್ತಾರೆ . ನನ್ನ ಅತ್ತೆಗೆ ಮೊದಲು ಇನ್ನೊಂದು ಮದುವೆ ಆಗಿತ್ತು ಎಂದರೆ ಸರಿಯಲ್ಲ .

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದಿನ ಪಾಟಿಸವಾಲಿಗಾಗಿ ಕಾಲಾವಕಾಶ ಕೋರಿದ್ದು ನೀಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.